11



# ಆಶ ಆಟ

172

| | | |
|---|---|---|
| 10 | 11 | 12 |
| 14 | 15 | 16 |

11



# ఆశ ఆట

172

| | | |
|---|---|---|
| 10 | 11 | 12 |
| 13 | 14 | 15 |

11



# ಮೌಲ್ಯಮಾಪನ

## ಅಂಕಿಗಳ ಕಲ್ಪನೆ (10-19)

173

**ಸೂಚನೆ :** 11 ರಿಂದ 19ರವರೆಗೆ ಪ್ರತೀ ಸಂಖ್ಯೆಯನ್ನು ಪ್ರತ್ಯೇಕ ಹಾಳೆಯಲ್ಲಿ ಬರೆ ಮತ್ತು ಒಂದು ಹಾಳೆಯಲ್ಲಿ 01 ರಿಂದ 19ರವರೆಗಿನ ಸಂಖ್ಯೆಗಳನ್ನು ಕ್ರಮವಾಗಿ ಕಂಬಸಾಲಿನಲ್ಲಿ ಹಾಗೂ ಅಡ್ಡಸಾಲಿನಲ್ಲಿ ಬರೆ.

12



# ಸ್ಥಾನ ಬೆಲೆ ಕಲ್ಪನೆ (1-19)

174

**ಸೂಚನೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಈ ಹಂತಕ್ಕೆ ಬಂದ ಮಗುವಿಗೆ ಹೆಚ್ಚು ಗಮನ ಹರಿಸುತ್ತಾ ಶಿಕ್ಷಕರು ಸರಳ ಅಭಿನಯದ ಮೂಲಕ ಹಾಡನ್ನು ಹೇಳಿಕೊಟ್ಟು ಹೇಳಿಸುವುದು.

ಒಂದೋ ಎರಡೋ ಬಿಡಿ ವಸ್ತುಗಳ
ಎಣಿಸುವುದು ಸುಲಭ
ತುಂಬಾ ತುಂಬಾ ಸಂಖ್ಯೆಯಲ್ಲಿದ್ದರೆ
ಕಷ್ಟಾ ಅಬ್ಬಬ್ಬಾ !

ಕಷ್ಟಗಿಷ್ಟ ಏನೂ ಇಲ್ಲ
ಹೀಗೆ ಮಾಡೋಣ

ಹೇಗೆ ? ಹೇಗೆ ? ಹೇಗೆ ?

ಹತ್ತು ಹತ್ತರ ಗುಂಪುಮಾಡಿ
ಲೆಕ್ಕ ಮಾಡೋಣ

ಓ ಹೋ... ಹೌದಲ್ಲ...

ಹದಿ ಮೂರು ಕಡ್ಡಿಗಳು ಎಂದರೆ ಏನು
ಹೇಳಿರಿ ಈಗ ನೀವು

ಹಾಂ! ಗೊತ್ತಾಯ್ತು, ಗೊತ್ತಾಯ್ತು

ಹತ್ತರದೊಂದು ಕಟ್ಟು ಮತ್ತು
ಬಿಡಿಗಳು ಮಾತ್ರ ಮೂರೇಮೂರು.

ಆಧಾರ : ಚುಕ್ಕಿ ಚಿನ್ನಾ/ಚಿಣ್ಣರ ಚುಕ್ಕಿ ಶಿಕ್ಷಕರ ಮಾರ್ಗದರ್ಶಿ

12



# ಸ್ಥಾನ ಬೆಲೆ ಕಲ್ಪನೆ (1 - 19)

175

**ಉದ್ದೇಶ :** ಬಿಡಿ ಮತ್ತು ಹತ್ತರ ಸ್ಥಾನ ಬೆಲೆ ಕಲ್ಪನೆ ಮೂಡಿಸುವುದು.

**ಸಾಮಗ್ರಿ :** ಕಡ್ಡಿಗಳು, ಅಂಕಿಸಂಖ್ಯೆಗಳ ಮಿಂಚು ಪಟ್ಟಿಗಳು (1 ರಿಂದ 19 ರವರೆಗೆ)

ಶಿಕ್ಷಕರು ವಿದ್ಯಾರ್ಥಿಗಳನ್ನು ವೃತ್ತಾಕಾರದಲ್ಲಿ ಕೂರಿಸಿ ಎಲ್ಲರಿಗೂ ಕಾಣುವಂತೆ 11 ಕಡ್ಡಿಗಳನ್ನು ತೆಗೆದುಕೊಂಡು 10 ಕಡ್ಡಿಗಳನ್ನು ಎಣಿಸಿ ಒಂದು ಕಟ್ಟನ್ನು ಮಾಡುವುದು ಮತ್ತು ಇದನ್ನು ಒಂದು ಹತ್ತರ ಕಟ್ಟು ಎಂದು ಹೇಳುವುದು. ನಂತರ ಉಳಿದ ಒಂದು ಕಡ್ಡಿಯನ್ನು 'ಬಿಡಿ' ಎದು ಹೇಳುವುದು.




ನಂತರ ನೆಲದ ಮೇಲೆ ಅಕ್ಕ ಪಕ್ಕ 2 ವೃತ್ತಗಳನ್ನು ಬರೆದು ಮೊದಲನೇ ವೃತ್ತದಲ್ಲಿ 10ರ ಕಟ್ಟನ್ನಿಟ್ಟು 2ನೇ ವೃತ್ತದಲ್ಲಿ ಬಿಡಿ ಕಡ್ಡಿಯನ್ನಿಡುವುದು. ನಂತರ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹತ್ತರ ಎಷ್ಟು ಕಟ್ಟುಗಳು ಮೊದಲನೇ ವೃತ್ತದಲ್ಲಿವೆ ಎಂದು ಪ್ರಶ್ನಿಸಿ ಉತ್ತರ ಪಡೆಯುವುದು. ಅದೇ ರೀತಿ 2ನೇ ವೃತ್ತದಲ್ಲಿ ಎಷ್ಟು ಬಿಡಿ ಕಡ್ಡಿಗಳಿವೆ ಎಂದು ಪ್ರಶ್ನಿಸಿ ಉತ್ತರ ಪಡೆಯುವುದು.

ನಂತರ 11ನ್ನು ಬರೆಯುವ ಕ್ರಮವನ್ನು (ಮೇಲ್ಕಂಡ ಪ್ರಶ್ನೆ ಉತ್ತರಗಳನ್ನು ಆಧರಿಸಿ) ತಿಳಿಸುವುದು ಮತ್ತು ಹತ್ತು ಮತ್ತು ಬಿಡಿ ಸ್ಥಾನಗಳ ಪರಿಚಯ ಮಾಡಿಸುತ್ತಾ 12, 13, 14, 15 ಹೀಗೆ 19 ರವರೆಗೆ ಸಂಖ್ಯೆಗಳನ್ನು ರಚಿಸುತ್ತಾ ಪ್ರತಿ ಸಂಖ್ಯೆಯಲ್ಲಿ '1' ರ ಸ್ಥಾನ ಬೆಲೆ ಹತ್ತು ಎಂದು ಇನ್ನೊಂದು ವೃತ್ತದಲ್ಲಿ ಬರುವ ಅಂಕಿಗಳ ಸ್ಥಾನ ಬೆಲೆ 'ಬಿಡಿ' ಎಂದು ಹೇಳಿ ಕೊಟ್ಟು ಹೇಳಿಸುವುದು (ಬಿಡಿ ಸ್ಥಾನದಲ್ಲಿರುವ ಸಂಖ್ಯೆಯ ಮುಖಬೆಲೆ ಮತ್ತು ಸ್ಥಾನ ಬೆಲೆ ಒಂದೇ ಆಗಿರುತ್ತದೆ ಎಂದು ಕಲಿಸುವುದು).

ಮಕ್ಕಳಿಗೆ 'ಹತ್ತು' ಮತ್ತು 'ಬಿಡಿ'ಯ ಕಲ್ಪನೆ ಮೂಡಿಸುತ್ತಾ ಸಂಖ್ಯಾರಚನೆಯ ಬಗ್ಗೆ ತಿಳುವಳಿಕೆ ಮೂಡಿಸುವುದು.

12

# ಮೌಲ್ಯಮಾಪನ

## ಸ್ಥಾನ ಬೆಲೆ ಕಲ್ಪನೆ (1 - 19)

179



ಮೇಲಿನ ಗಿಡದ ಚಿತ್ರವನ್ನು ನೋಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

1. ಗಿಡದಲ್ಲಿರುವ ಹೂವುಗಳ ಸಂಖ್ಯೆ ☐
2. ಗಿಡದಲ್ಲಿರುವ ಎಲೆಗಳು ಸಂಖ್ಯೆ ☐
3. ಗಿಡದಲ್ಲಿರುವ ಹಣ್ಣುಗಳ ಸಂಖ್ಯೆ ☐
4. ಎಲೆಗಳ ಸಂಖ್ಯೆಯ ಸ್ಥಾನ ಬೆಲೆ

| ಹತ್ತು | ಬಿಡಿ |
|---|---|
| | |

5. ಹೂವುಗಳ ಸಂಖ್ಯೆಯ ಸ್ಥಾನ ಬೆಲೆ

| ಹತ್ತು | ಬಿಡಿ |
|---|---|
| | |

6. ಹಣ್ಣುಗಳ ಸಂಖ್ಯೆಯ ಸ್ಥಾನ ಬೆಲೆ

| ಹತ್ತು | ಬಿಡಿ |
|---|---|
| | |

**ಸೂಚನೆ :** ಮೌಖಿಕವಾಗಿ ನಿನ್ನ ಸ್ನೇಹಿತನಿಗೆ/ಶಿಕ್ಷಕರಿಗೆ ಹೇಳುತ್ತಾ ನೋಟ್ ಪುಸ್ತಕದಲ್ಲಿ ಬರೆ.

12



# ಮೌಲ್ಯಮಾಪನ

## ಸ್ಥಾನ ಬೆಲೆ

**180**

| ಹತ್ತು | ಬಿಡಿ | | | | | ಹತ್ತು | ಬಿಡಿ |
|---|---|---|---|---|---|---|---|
| 1 | 2 | = | | 18 | = | | |
| 1 | 0 | = | | 17 | = | | |
| 1 | 1 | = | | 10 | = | | |
| 1 | 5 | = | | 15 | = | | |
| 1 | 8 | = | | 13 | = | | |
| 1 | 6 | = | | 11 | = | | |
| 1 | 2 | = | | 19 | = | | |
| 1 | 7 | = | | 16 | = | | |

13

# ಹೊರಾಂಗಣ

## ಹೆಚ್ಚು - ಕಡಿಮೆ - ಸಮ (1-19)

**181**

**ಉದ್ದೇಶ** : 1 ರಿಂದ 19ರವರೆಗಿನ ಅಂಕಿಗಳಲ್ಲಿ ಹೆಚ್ಚು - ಕಡಿಮೆ - ಸಮ ಇವುಗಳ ಕಲ್ಪನೆ ಮೂಡಿಸುವುದು.

**ಸಾಮಗ್ರಿ** : ಮಕ್ಕಳನ್ನು ಬಳಸಿಕೊಂಡು

**ಕಲಿಸುವ ಕ್ರಮ :**

★ ಬಯಲಿನಲ್ಲಿ 2 ವೃತ್ತ ಹಾಕಿ, ಪ್ರತಿವೃತ್ತದೊಳಗೆ ಹತ್ತು ಮಕ್ಕಳಂತೆ ಎಣಿಸಿ ನಿಲ್ಲಿಸುವುದು. ಉಳಿದ ವಿದ್ಯಾರ್ಥಿಗಳನ್ನು ವೀಕ್ಷಿಸುವಂತೆ ಹೇಳುವುದು.

★ ಒಂದು ವೃತ್ತದಲ್ಲಿನ ಮಕ್ಕಳನ್ನು ಎಣಿಸಿ, ಎರಡನೇ ವೃತ್ತದಲ್ಲಿರುವ 3 ಮಕ್ಕಳನ್ನು ಒಂದನೇ ವೃತ್ತಕ್ಕೆ ಸೇರ್ಪಡೆ ಯಾಗುವಂತೆ ಹೇಳುವುದು.

★ ಈಗ ಎರಡೂ ವೃತ್ತಗಳಲ್ಲಿನ ಮಕ್ಕಳನ್ನು ಹೋಲಿಸಿ ಹೆಚ್ಚು ಕಡಿಮೆ ಕಲ್ಪನೆ ಮೂಡಿಸುವುದು.

★ ಎರಡೂ ವೃತ್ತಗಳಲ್ಲಿ ಸಮ ಸಂಖ್ಯೆ ಮಕ್ಕಳಿರುವಂತೆ ಮಾಡಿ ಸಮದ ಕಲ್ಪನೆ ಮೂಡಿಸುವುದು.



ಹೆಚ್ಚು ಕಡಿಮೆ



ಸಮ ಸಮ

13



# ಹೆಚ್ಚು, ಕಡಿಮೆ, ಸಮ

**182**

**ಉದ್ದೇಶ :** 1 ರಿಂದ 19ರವರೆಗಿನ ಸಂಖ್ಯೆಗಳಲ್ಲಿ ಹೆಚ್ಚು, ಕಡಿಮೆ, ಸಮ ತಿಳಿಯುವುದು.

**ಸಾಮಗ್ರಿ :** ಕಲ್ಲುಗಳು, ಮಣಿಗಳು, ಕಡ್ಡಿಗಳು, ಅಂಕಿ ಸಂಖ್ಯೆಗಳ ಮಿಂಚು ಪಟ್ಟಿಗಳು. (1ರಿಂದ 19ರವರೆಗೆ)

**ಕಲಿಸುವ ಕ್ರಮ :**

1. 1 ರಿಂದ 19 ರವರೆಗಿನ ಯಾವುದಾದರೂ 2 ಮಿಂಚು ಪಟ್ಟಿಗಳನ್ನು ತೆಗೆದುಕೊಳ್ಳುವುದು.
2. ಆ ಅಂಕಿ ಸಂಖ್ಯೆಗಳ ಮಿಂಚು ಪಟ್ಟಿಗಳಲ್ಲಿ ಯಾವುದು ದೊಡ್ಡದು, ಯಾವುದು ಚಿಕ್ಕದು ಎಂದು ಹೇಳಿ ಕೊಟ್ಟು ನಂತರ ಮಕ್ಕಳಿಂದ ಹೇಳಿಸುವುದು. ಬಳಸಿರುವ 2 ಸಂಖ್ಯೆಗಳು ಒಂದೇ ಆಗಿದ್ದರೆ ಅವು ಸಮ ಸಂಖ್ಯೆಗಳೆಂದು ಮನದಟ್ಟು ಮಾಡುವುದು.

**ಸೂಚನೆ :** ಈ ರೀತಿ ಬೇರೆ ಬೇರೆ ಚಟುವಟಿಕೆಗಳನ್ನು ಮಾಡಿಸಿ ದೊಡ್ಡದು ಎಂದರೆ ಹೆಚ್ಚು, ಚಿಕ್ಕದು ಎಂದರೆ ಕಡಿಮೆ ಹಾಗೂ ಸಮದ ಅರಿವು ಮೂಡಿಸುವುದು.

**ಶಿಕ್ಷಕರ ಗಮನಕ್ಕೆ :** ಮೇಲೆ ನೀಡಿರುವ ಕಲಿಸುವ ಕ್ರಮದಂತೆ ವಿದ್ಯಾರ್ಥಿಗೆ ಅನೇಕ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

13



# ಏರಿಕೆ - ಇಳಿಕೆ

186

**ಉದ್ದೇಶ** : 1 ರಿಂದ 19ರವರೆಗಿನ ಅಂಕಿ ಸಂಖ್ಯೆಗಳನ್ನು ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಬರೆಯಲು ಕಲಿಸುವುದು.

**ಸಾಮಗ್ರಿ** : 1 ರಿಂದ 19ರವರೆಗಿನ ಸಂಖ್ಯೆಗಳ ಮಿಂಚುಪಟ್ಟಿಗಳು.

**ಕಲಿಸುವ ಕ್ರಮ :**

1. ಡಬ್ಬದಲ್ಲಿರುವ ಮಿಂಚುಪಟ್ಟಿಗಳಲ್ಲಿ ತಲಾ 4 ಮಿಂಚುಪಟ್ಟಿಗಳನ್ನು ತೆಗೆದುಕೊಳ್ಳಲು ಮಕ್ಕಳಿಗೆ ಹೇಳುವುದು.
2. ನಾಲ್ಕು ಮಿಂಚುಪಟ್ಟಿಗಳಲ್ಲಿ ಕನಿಷ್ಟ ಬೆಲೆಯ ಮಿಂಚುಪಟ್ಟಿ ಗುರ್ತಿಸಿ ಅದರ ಮುಂದೆ ಹೆಚ್ಚು ಮಿಂಚುಪಟ್ಟಿಗಳನ್ನು ಏರಿಕೆ ಕ್ರಮದಲ್ಲಿ ಜೋಡಿಸುತ್ತ ಹೇಳಿಸುವ ಮತ್ತು ಬರೆಸುವ ಚಟುವಟಿಕೆ ಮಾಡಿಸುವುದು. ಇದೇ ರೀತಿ ಹಲವು ಚಟುವಟಿಕೆ ಮಾಡಿಸುತ್ತ ಏರಿಕೆ ಎಂದರೆ ಹೆಚ್ಚುತ್ತಾ ಹೋಗುತ್ತದೆ ಎಂಬ ಅರಿವನ್ನು ಮೂಡಿಸುವುದು.
3. ಇದೇ ರೀತಿಯ ಚಟುವಟಿಕೆಯನ್ನು ವಿರುದ್ಧ ಕ್ರಿಯೆಯನ್ನು ಮಾಡಿಸುತ್ತ ಇಳಿಕೆ ಕ್ರಮ ಪರಿಚಯ ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :** ಮೇಲೆ ನೀಡಿರುವ ಕಲಿಸುವ ಕ್ರಮದಂತೆ ವಿದ್ಯಾರ್ಥಿಗೆ ಅನೇಕ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.